ಓ .ಎಸ್ . ನಂ. 351/2011 ಪಿಡಬ್ಲ್ಯೂ: 2

<u>ದಿನಾಂಕ 07.08.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ- ಶ್ರೀ ಎನ್.ಆರ್.ಕೆ 6ನೇಪ್ರತಿವಾದಿ ಪರ ವಕೀಲರಿಂದಃ</u>

ನಿಪಿ-2ರಲ್ಲಿರುವ ಡಿ.ಎಸ್ ಆಂಜನೇಯ ಎಂಬುದು ನಮ್ಮ ತಂದೆಯ ಹೆಸರು ಎಂದರೆ ಸರಿ. ನಿಪಿ-2ರಲ್ಲಿ ಸಾಕ್ಷಿದಾರರುಗಳ ತಂದೆಯ ಹೆಸರು ನಮೂದಾಗಿರುವುದಿಲ್ಲ. ನಿಪಿ-2 ರ ಕ್ರಯದ ಕರಾರಿನಲ್ಲಿ ನಮಗೆ ದಾವಾ ಸ್ವತ್ತಿನ ಸ್ವಾಧೀನವನ್ನು ನೀಡಿರುವುದರ ಬಗ್ಗೆ ನಮೂದಾಗಿರುವುದಿಲ್ಲ. ನಿಪಿ-2 ರ ದಾಖಲೆಯನ್ನು ಬಾಲಕೃಷ್ಣ ರವರು ಬರೆದುಕೊಟ್ಟಿರುವುದಿಲ್ಲ ಹಾಗೂ ನಿಪಿ-2ರಲ್ಲಿರುವ ಸಹಿ ಬಾಲಕೃಷ್ಣರವರ ಸಹಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-2 ರ ದಾಖಲೆಯನ್ನು ನಾನು ಉತಾರುಪಡಿಸಿ/ಸೃಷ್ಟಿ ಮಾಡಿ ದಾವಾ ಸ್ವತ್ತನ್ನು ಕಬಳಿಸಲು ಪ್ರಯತ್ನಿಸುತ್ತಿದ್ದೇನೆ ಎಂದರೆ ಸರಿಯಲ್ಲ.

ಬಾಲಕೃಷ್ಣ ರವರ ಮರಣದ ನಂತರ ಅವರ ಹೆಂಡತಿ ಪ್ರತಿವಾದಿ 1 ರವರ ಹೆಸರಿಗೆ ದಾವಾ ಸ್ವತ್ತಿನ ಖಾತೆಯು 2012ನೇ ಸಾಲಿನಲ್ಲಿ ವರ್ಗಾವಣೆಯಾಗಿರುತ್ತದೆ. ಪ್ರತಿವಾದಿ -1ರಿಂದ 5 ರವರುಗಳು ದಾವಾ ಸ್ವತ್ತನ್ನು ದಿಃ15.02.2019ರಂದು ಪ್ರತಿವಾದಿ 6 ಮತ್ತು 7 ರವರ ಪರವಾಗಿ ಕ್ರಯ ಮಾಡಿರುತ್ತಾರೆ ಎಂದರೆ ಸರಿ. ಸದರಿ ಕ್ರಯಪತ್ರವನ್ನು ಅನುಸರಿಸಿ ಪ್ರತಿವಾದಿ 7 ರವರ ಹೆಸರಿಗೆ ಖಾತೆ ದಾಖಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಬಾಲಕೃಷ್ಣ ರವರಿಗೆ ಸೇರಿದ ಸರ್ವೆ ನಂಬರ್ 148/1 ಪೋಡಾಗಿ ಸರ್ವೆ ನಂಬರ್ 148/5ರಲ್ಲಿ 0.45½ ಸಂಟ್ಸ್ ಪ್ರತಿವಾದಿ -7 ರವರಿಗೆ ಕ್ರಯವಾಗಿರುತ್ತದೆ ಎಂದರೆ ಸರಿ. ಪ್ರತಿವಾದಿ-7 ರವರು ದಾವಾ ಸ್ವತ್ತನ್ನು ಕ್ರಯಕೆಕ ಪಡೆದ ನಂತರ ದಾವಾ ಸ್ವತ್ತನ್ನು ಸಹ ಒಳಗೊಂಡಂತೆ ದಾವಾ ಸ್ವತ್ತಿನ ಆಸುಪಾಸಿನಲ್ಲಿರುವ ಎಲ್ಲಾ ಸ್ವತ್ತುಗಳು ಅನ್ಯಕ್ರಾಂತವಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಮತ್ತು ಇತರೇ ಸ್ವತ್ತುಗಳು ಅನ್ಯಕ್ರಾಂತವಾಗಿರುವ ವಿಚಾರ ನನಗೆ ತಿಳಿದಿರುತ್ತದೆ. ಪ್ರತಿವಾದಿ -7 ರವರು ಕ್ರಯಕ್ಕೆ ಪಡೆದು ಅನ್ಯಕ್ರಾಂತ ಮಾಡಿಸಿ ದಾವಾ ಸ್ವತ್ತು ಮತ್ತು ಆಜುಬಾಜಿನ ಇತರೇ ಎಲ್ಲಾ ಸ್ವತ್ತುಗಳನ್ನು ನಿವೇಶನಗಳಾಗಿ ಮಾಡಿರುತ್ತಾರೆ

ಎಂದರೆ ಸಾಕಿಯು ದಾವಾ ಸ್ವತ್ತನ್ನು ಹೊರತುಪಡಿಸಿ ಬೇರೆ ಎಲ್ಲಾ ಸ್ವತ್ತುಗಳನ್ನು ನಿವೇಶನಗಳಾಗಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತನ್ನು ಕ್ರಯಕ್ಕೆ ಪಡೆದು ಅನ್ಯಕ್ರಾಂತ ಪಡಿಸಿದ ನಂತರ ದಾವಾ ಸ್ವತ್ತನ್ನು ಸಹ ಒಳಗೊಂಡು ಆಜುಬಾಜಿನ ಎಲ್ಲಾ ಸ್ವತ್ತುಗಳನ್ನು ನಿವೇಶನಗಳಾಗಿ ಮಾಡಿರುವ ಬಗ್ಗೆ ನನಗೆ ತಿಳಿದಿದ್ದರು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ15.02.2019ರ ಕ್ರಯಪತ್ರವನ್ನು ಪ್ರಶ್ನಿಸಿ ನಾನು ನನ್ನ ದಾವೆಯಲ್ಲಿ ಯಾವುದೇ ಪರಿಹಾರ ಕೇಳಿರುವುದಿಲ್ಲ ಎಂದರೆ ಸರಿ. ನಾವು ದಾವಾ ಸ್ವತ್ತನ್ನು ಅಭಿವೃದ್ಧಿ ಪಡಿಸಿರುವುದಿಲ್ಲ ಹಾಗೂ ನನ್ನ ದಾವಾ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಅಭಿವೃದ್ಧಿ ಪಡಿಸಿರುತ್ತೇವೆ ಎಂದು ನಮೂದಿಸಿರುವುದಿಲ್ಲ. ಪ್ರತಿವಾದಿ –7 ರವರ ಹೆಸರಿಗೆ ದಾಖಲಾಗಿರುವ ಖಾತೆಯನ್ನು ಪ್ರಶ್ನಿಸಿ ನಾವು ಯಾವುದೇ ಪ್ರಕರಣವನ್ನು ದಾಖಲಿಸಿರುವುದಿಲ್ಲ.

ಪ್ರತಿವಾದಿ –6 ಮತ್ತು 7 ರವರು ಈ ನ್ಯಾಯಾಲಯದಲ್ಲಿ ಸಲ್ಲಿಸಿರುವ ಪ್ರತಿವಾದ ಪತ್ರದ ಬಗ್ಗೆ ನನಗೆ ಗೊತ್ತಿಲ್ಲ ಮತ್ತು ಸದರಿ ವಿಚಾರವನ್ನು ನನ್ನ ವಕೀಲರ ಮೂಲಕ ಕೇಳಿ ತಿಳಿದುಕೊಂಡಿರುವುದಿಲ್ಲ. ಪ್ರತಿವಾದಿ –6 ರವರು ದಾವಾ ಸ್ವತ್ತು ಮತ್ತು ಇತರೇ ಸ್ವತ್ತುಗಳನ್ನು ಕ್ರಯಕ್ಕೆ ಪಡೆಯುವ ಪೂರ್ವದಲ್ಲಿ ಅವರ ವಕೀಲರಾದ ಸೋಮಶೇಖರ್ ರವರ ಮುಖಾಂತರ ದಿನಪತ್ರಿಕೆಯಲ್ಲಿ ಸಾರ್ವಜನಿಕ ನೋಟೀಸು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನಿಪಿ–2ರಂತೆ ಯಾವುದೇ ಕ್ರಯದ ಕರಾರು ನಡೆಯದಿದ್ದರೂ ದಾವಾ ಸ್ವತ್ತನ್ನು ಕಬಳಿಸಬೇಕೆಂಬುವ ಉದ್ದೇಶದಿಂದ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಒಳಗೊಂಡಂತೆ ಆಜುಬಾಜಿನ ಎಲ್ಲ ಸ್ವತ್ತುಗಳು ನಿವೇಶನಗಳಾಗಿ ಪರಿವರ್ತನೆಗೊಂಡು ಪ್ರತಿವಾದಿ –7 ರವರ ಸ್ವಾಧೀನದಲ್ಲಿರುತ್ತದೆ ಎಂದರೆ ಸಾಕ್ಷಿಯು ದಾವಾ ಸ್ವತ್ತನ್ನು ಹೊರತುಪಡಿಸಿ ಬೇರೆ ಎಲ್ಲಾ ಸ್ವತ್ತುಗಳು ಪ್ರತಿವಾದಿ –7 ರವರ ಸ್ವಾಧೀನದಲ್ಲಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನಲ್ಲಿ ನಾನು ಸ್ವಾಧೀನದಲ್ಲಿರುವ ಬಗ್ಗೆ ತೋರಿಸಲು ಪಹಣಿ, ಎಂ.ಆರ್, ಮರಣಪ್ರಮಾಣ ಪತ್ರಗಳು,ತಕರಾರು ಅರ್ಜಿಗಳನ್ನು ಸಲ್ಲಿಸಿರುತ್ತೇವೆ. ದಾವಾ ಸ್ವತ್ತಿಗೆ

ಸಂಬಂಧಿಸಿದಂತೆ ನ್ಯಾಯಾಲಯದ ಮುಂದೆ ನಾನು ಹಾಜರುಪಡಿಸಿರುವ ದಾಖಲೆಗಳನ್ನು ಹೊರತುಪಡಿಸಿ ನನ್ನ ಬಳಿ ಬೇರೆ ಯಾವುದೇ ದಾಖಲೆಗಳಿರುವುದಿಲ್ಲ.

**ಮರುವಿಚಾರಣೆಃಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಕೊಳ್ಳೇಗಾಲ